**ಓ.ಎಸ್. ನಂ. 78/2019** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 6.1.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದಃ

2 ನೇ ಪ್ರತಿವಾದಿ ಮದುವೆಯಾಗಿ ಅವರ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡು 44-45 ವರ್ಷವಾಗಿರುತ್ತದೆ. ನನ್ನ ತಂದೆ 44-45 ವರ್ಷಗಳ ಹಿಂದೆ ತೀರಿಕೊಂಡಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 3 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ತಕರಾರಿನ ಬಗ್ಗೆ ತಿಳಿದುಕೊಂಡಿರುವುದಿಲ್ಲ. ನಿಪಿ7 ರಿಂದ 12 ರಲ್ಲಿ 3 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ1 ರಿಂದ 5 ರ ಮೂಲಕ್ರಯಪತ್ರಗಳು 3 ನೇ ಪ್ರತಿವಾದಿಯ ಬಳಿ ಇರುತ್ತದೆ. ನಿಪಿ1 ರಿಂದ 5 ರಲ್ಲಿ 3 ನೇ ಪ್ರತಿವಾದಿಯು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವ ಬಗ್ಗೆ ನಮೂದು ಇರುವುದಿಲ್ಲ. ಹುಲಿಕುರ ಗ್ರಾಮದ ಜಮೀನಿನಲ್ಲಿ ಮಣ್ಣಿನ ಶೇಖರಣೆಯನ್ನು ನಾನು ಮಾಡಿರುವುದಿಲ್ಲ. ನನ್ನ ಬಳಿ ಟಾಕ್ಟರ್ ಮತ್ತು ಜೆ.ಸಿ.ಬಿ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಸಂಬಂಧಪಟ್ಟ ಒಂದು ಆರ್.ಸಿ.ಸಿ. ಮನೆ ಇದ್ದು ಅದರ ವಿಸ್ತೀರ್ಣ 600 ಚದರ ಅಡಿ ಇರುತ್ತದೆ. ಸದರಿ ಮನೆಯು ನನ್ನ ಹೆಸರಿನಲ್ಲಿದ್ದು, ನನಗೆ ನನ್ನ ತಾಯಿಯಿಂದ ಬಂದಿರುತ್ತದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನನ್ನ ಹೆಸರಿನಲ್ಲಿ, ನನ್ನ ತಾಯಿಯ ಹೆಸರಿನಲ್ಲಿ ಮತ್ತು 3 ನೇ ಪ್ರತಿವಾದಿಯ ಹೆಸರಿನಲ್ಲಿ ತಲಾ ಒಂದು ಸೈಟು ಇದ್ದು ಅವುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನಾನು ಜೆ.ಸಿ.ಬಿ ಮತ್ತು ಟ್ರಾಕ್ಟರ್ ನಿಂದ ಸಂಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಯಾವುದೇ ಜಮೀನನ್ನು ಖರೀದಿ ಮಾಡಿರುವುದಿಲ್ಲ. 3 ನೇ ಪ್ರತಿವಾದಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಅವರು ಕೂಲಿ ಮತ್ತು ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಯು ವ್ಯವಸಾಯ ಮತ್ತು ಕೂಲಿ ಹಣದಿಂದ ದಾವಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಎಲ್ಲರೂ ಒಟ್ಟಿಗೆ ಇದ್ದಾಗ ಖರೀದಿ ಮಾಡಿರುತ್ತೇವೆ ಎನ್ನುವರು. ಬೊಪ್ಪನಹಳ್ಳಿಯಲ್ಲಿರುವ ಮನೆಯನ್ನು ನಾನು ಮಂಜುಳಾ ಎಂಬುವವರಿಗೆ ಬಾಡಿಗೆಗೆ ನೀಡಿರುತ್ತೇನೆ. ನನ್ನ ತಂದೆ ತಾಯಿಗೆ ಸಂಬಂಧಪಟ್ಟ ಹಾಗೂ ನನಗೆ ಸಂಬಂಧಪಟ್ಟ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲು ಯಾವುದೇ ತೊಂದರೆ ಇರಲಿಲ್ಲ. ದಾವಆಸ್ತಿಗಳು 3 ನೇ ಪ್ರತಿವಾದಿಯ ಸ್ವಂತ ಸಂಪಾದನೆಯಿಂದ ಖರೀದಿ ಮಾಡಿದ ಆಸ್ತಿಗಳಾಗಿರುವುದರಿಂದ ನನಗೆ ದಾವಆಸ್ತಿಗಳಲ್ಲಿ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಮತ್ತು ನನಗೆ ಸಂಬಂಧಪಟ್ಟ ಆಸ್ತಿಗಳನ್ನು ಈ

ದಾವೆಯಲ್ಲಿ ಸೇರಿಸದೇ ಕೇವಲ 3 ನೇ ಪ್ರತಿವಾದಿಯ ಆಸ್ತಿಗಳನ್ನು ಅವರಿಗೆ ತೊಂದರೆ ನೀಡಲು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.